ಗ್ರಂಥಾಲಯಗಳಿಗೆ, ಸ್ನೇಹಿತರಿಗೆ ಹಾಗೂ ವಿದ್ಯಾರ್ಥಿಗಳಿಗೆ ದಾನಮಾಡಿದರು. ಕನ್ನಡ ಹಾಗೂ ಕನ್ನಡೇತರ ಗಣ್ಯ ಲೇಖಕರೊಂದಿಗೆ ನಿರಂತರ ಪತ್ರ ಸಂಪರ್ಕದಲ್ಲಿದ್ದ ಅವರಲ್ಲಿ ಪತ್ರಗಳ ದೊಡ್ಡ ಸಂಗ್ರಹವೇ ಇತ್ತು. ಅದನ್ನೂ ತಮಗೆ ಬಂದ ಪ್ರಶಸ್ತಿ ಫಲಕಗಳನ್ನೂ ಮನೋಹರ ಗ್ರಂಥಮಾಲೆಗೆ ನೀಡಿದರು. ಆಯ್ದ ಕೆಲವು ಪತ್ರಗಳನ್ನು ನನಗೆ ಒಯ್ಯಲು ಹೇಳಿದರು. ತಾವು ಮಾಡಿಕೊಂಡಿದ್ದ ಟಿಪ್ಪಣಿಗಳು, ಪೇಪರ್ ಕಟಿಂಗ್ಸ್, ಅಪರೂಪದ ಲೇಖನಗಳ ಪ್ರತಿಗಳಿದ್ದ ಫೈಲ್‌ಗಳನ್ನು ಆಸಕ್ತರಿಗೆ ಹಂಚಿದರು. ಕೊನೆಯಲ್ಲಿ ತಾವೇ ಬರೆದ ಎಂಬತ್ತಕ್ಕೂ ಹೆಚ್ಚು ಪುಸ್ತಕಗಳನ್ನೂ ಹಂಚಿ ಪೂರ್ಣ ಹಗುರಾಗಿ ಬೆಂಗಳೂರಿಗೆ ನಡೆದರು –ಮಗನೊಂದಿಗೆ ವಾಸಕ್ಕಾಗಿ.

ಬೆಂಗಳೂರಿನಲ್ಲಿದ್ದಾಗ ಒಮ್ಮೆ ಮಾತ್ರ ಅವರನ್ನು ಭೆಟ್ಟಿಯಾಗಿದ್ದೆ. ಅವರು ಆಗ ತಮ್ಮ ಗುರುಗಳ ಸೂಚನೆಯ ಮೇರೆಗೆ ಡಿ.ಎಸ್. ಸುಬ್ಬರಾಮಯ್ಯನವರು 'ಮಾನಸೋಲ್ಲಾಸ' ಹಾಗೂ 'ತತ್ತ್ವಸುಧಾ' ವಾರ್ತಿಕೆಗಳನ್ನು ಆಧರಿಸಿ ರಚಿಸಿದ ಶಂಕರಾಚಾರ್ಯರ 'ದಕ್ಷಿಣಾಮೂರ್ತಿ ಸ್ತೋತ್ರಮ್'ನ ಸಾವಿರ ಪುಟಗಳ ಇಂಗ್ಲಿಷ್ ವ್ಯಾಖ್ಯಾನ ಗ್ರಂಥದ ಎರಡೂ ಸಂಪುಟಗಳನ್ನು ಕನ್ನಡಕ್ಕೆ ಅನುವಾದಿಸಲು ಆರಂಭಿಸಿದ್ದರು. ಈ ಕಾರ್ಯದಲ್ಲಿ ಮಗ ರವಿಯ ನೆರವೂ ದೊರಕಿರುವುದು ಅವರಿಗೆ ಖುಷಿಕೊಟ್ಟಿತ್ತು. ಅವರಿಗದು ಗುರುಋಣ ಸಂದಾಯಿಸುವ ಅವಕಾಶ.

ಉಳಿದಂತೆ ಪ್ರತಿ ಶನಿವಾರ ಸಾಯಂಕಾಲ ಫೋನ್‌ನಲ್ಲಿ ಮಾತಾಡುತ್ತಿದ್ದರು – ನನ್ನೊಂದಿಗೆ ಸಾಹಿತ್ಯ, ತತ್ತ್ವಶಾಸ್ತ್ರದ ಓದಿನ ಕುರಿತು ಮತ್ತು ಕೆಲವೊಮ್ಮೆ ನನ್ನ ತಂದೆಯವರೊಂದಿಗೆ ವೃದ್ಧಾಪ್ಯ ಸಹಜವಾದ ಏರುಪೇರುಗಳು ಮತ್ತು ಐವತ್ತರ ದಶಕದ ಕುಮಟೆಯ ಕುರಿತು. ಎರಡು ವರ್ಷಗಳ ಹಿಂದೆ ಹೀಗೇ ಫೋನ್ ಮಾಡಿದಾಗ ಅವರ ತಮ್ಮ ಕೆ.ಎಸ್. ಆಮೂರ, ನಿಡುಗಾಲದ ಸ್ನೇಹಿತ ಕೆ.ಎಸ್. ದೇಶಪಾಂಡೆ ಹಾಗೂ ತೀರ ಈಚೆಗೆ ಶ್ರೀನಿವಾಸ ರಿತ್ತಿ ಅಗಲಿದ್ದನ್ನು ಹೇಳಿ 'ಸಹಿಸುವುದು ಕಷ್ಟ' ಎಂದರು. 'ಈಗ ನನ್ನ ಓರಿಗೆಯವರೆಂದರೆ ನಿಮ್ಮ ತಂದೆ ಮಾತ್ರ. ಅವರು ಆರೋಗ್ಯದಿಂದಿದ್ದಾರಲ್ಲ?' ಎಂದರು. ತಂದೆಯವರು ನಿಧನರಾಗಿ ನಾಲ್ಕು ದಿನ ಆಗಿತ್ತು. 'ಹೌದು' ಎಂದೆ. ತೊದಲಿರಬೇಕು. 'ಅವರಿಗೆ ಫೋನ್ ಕೊಡಿ' ಅಂದರು. ಕೊಂಚ ತಡೆದು 'ಬಾತ್ ರೂಂಗೆ ಹೋಗಿದ್ದಾರೆ' ಅಂದೆ. 'ಆಗಲಿ, ಅವರಿಗೆ ನಮಸ್ಕಾರ ತಿಳಿಸಿ' ಎಂದು ಫೋನ್ ಇಟ್ಟರು. ಆ ನಂತರದಲ್ಲಿ ನೂರಾರು ಸಲ ಅವರೊಂದಿಗೆ ಫೋನ್‌ನಲ್ಲಿ ಮಾತಾಡಿದ್ದೇನೆ. ಒಮ್ಮೆಯೂ ತಂದೆಯವರಿಗೆ ಫೋನ್ ಕೊಡಿ ಎಂದು ಅವರು ಕೇಳಲಿಲ್ಲ. ಆದರೆ, ತಪ್ಪದೇ, 'ಅವರಿಗೆ ಕೇಳಿದೆನೆಂದು ಹೇಳಿ' ಎಂದು ಮಾತು ಮುಗಿಸುತ್ತಿದ್ದರು.

ಅಪಾರ್ಟ್‌ಮೆಂಟಿನ ಹನ್ನೆರಡನೇ ಮಹಡಿಯಿಂದ ತಮ್ಮದೇ ಹೊಸ ಮನೆಗೆ ಅವರ ಕುಟುಂಬ ಇತ್ತೀಚೆಗೆ ಬಂದಿತ್ತು. ಫೋನ್‌ನಲ್ಲಿ ತಮ್ಮ ಕೊಠಡಿ ನೆಲಮಹಡಿಯಲ್ಲಿದೆ, ವಿಶಾಲವಾಗಿದೆ ಹಾಗೂ ಕಿಟಕಿಯಿಂದ ಮರಗಳು ಕಾಣುತ್ತಿವೆ ಎಂದು ಸಂಭ್ರಮದಿಂದ ಹೇಳಿದರು. ಫೋನ್ ಮಂಚದಿಂದ ದೂರದಲ್ಲಿರುವುದರಿಂದ ಇನ್ನು ಲ್ಯಾಂಡ್ ಲೈನ್‌ಗೆ ಮಾಡುವುದು ಬೇಡ, ಮೊಬೈಲ್‌ಗೆ ಮಾಡಿ ಎಂದು ಸೂಚಿಸಿದರು. ಮಾಡಿದಾಗ ಅವರಾಗಲೇ ವ್ಯಾಪ್ತಿ ಪ್ರದೇಶವನ್ನು ಬಿಟ್ಟು ನಡೆದಿದ್ದರು.

## 2

ಆಮೂರರು ಇಂಗ್ಲಿಷ್ ಅಧ್ಯಾಪಕರಾಗಿ ತಮ್ಮ ವೃತ್ತಿಜೀವನವನ್ನು ಆರಂಭಿಸಿದ್ದು ಕುಮಟಾದಲ್ಲಿ. ಆಗಲೇ ಅವರು ಎಂ.ಎನ್. ರಾಯ್‌ರ ವಿಚಾರಧಾರೆಯಿಂದ ಪ್ರಭಾವಿತರಾದರು. ಕನ್ನಡದ ಉಳಿದ ಕಡೆಯ ಲೇಖಕರು ಲೋಹಿಯಾವಾದಿಗಳಾಗಿದ್ದಾಗ ಉತ್ತರ ಕನ್ನಡದ ಗೌರೀಶ ಕಾಯ್ಕಿಣಿ, ಚಿತ್ತಾಲ ಬಂಧುಗಳು, ಶಾಂತಿನಾಥ ದೇಸಾಯಿ ಮುಂತಾದ ಎಲ್ಲ ಲೇಖಕರೂ ರಾಯಿಸ್ಟರಾಗಿದ್ದುದು ವಿಶೇಷ. ಮುಂದೆ ಆಮೂರರು ಗದಗಿನ ಕಾಲೇಜು, ಕರ್ನಾಟಕ ವಿಶ್ವವಿದ್ಯಾಲಯಗಳಲ್ಲಿ ಕೆಲಸ ಮಾಡಿ ಮರಾಠಾವಾಡಾ ವಿಶ್ವವಿದ್ಯಾಲಯವನ್ನು ಸೇರಿ ಅಲ್ಲೇ 1985ರಲ್ಲಿ ನಿವೃತ್ತರಾದರು. ಮೂವತ್ತೈದು